# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-2568/2013/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 20/04/2016

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ ಜಿದ್ದಿ ಎಲ್.ವಿ., ಪಂಚಾಯತ್ ಅಭಿವೃದ್ಧಿ ಅಧಿಕಾರಿ, (2) ಶ್ರೀ ಅಣ್ಣಪ್ಪ ಬಿ. ಅಹೀರಸಂಗ, ಅಧ್ಯಕ್ಷರು, (3) ಶ್ರೀ ಆರ್.ಕೆ. ರಾಠೋಡ್, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ನಿವೃತ್ತ), (4) ಶ್ರೀ ಎಂ.ಎನ್. ಜಂಜೋಡೆ, ಹಿಂದನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, (5) ಶ್ರೀಮತಿ ಕಮಲಾಬಾಯ್ ಶಾ. ಭಾರಣಿ, ಅಧ್ಯಕ್ಷರು (6) ಶ್ರೀಮತಿ ಮಂಗಳಾಬಾಯ್ ಬನ್ನೋಡೆ, ಅಧ್ಯಕ್ಷರು ಎಲ್ಲರೂ ಆಳೂರ್ ಗ್ರಾಮ ಪಂಚಾಯತ್, ಆಳೂರ್, ಇಂಡಿ ತಾಲೂಕ್, ವಿಜಾಪುರ ಜಿಲ್ಲೆ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಎಸಗಿದ ಅವ್ಯವಹಾರದ ಕುರಿತಂತೆ ವರದಿ.

******

ಶ್ರೀಮತಿ ಸುನಂದ ಕೊಂ ಲಕ್ಷ್ಮಣ ಹೊಸಮನಿ, ಇಂಗಳಗಿ ಗ್ರಾಮ ಮತ್ತು ಅಂಚೆ, ಇಂಡಿ ತಾಲೂಕ್, ವಿಜಪುರ ಜಿಲ್ಲೆ (ಇನ್ನು ಮುಂದೆ ಇವರನ್ನು 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ ಜಿದ್ದಿ ಎಲ್.ಬಿ. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಆಲೂರ್ ಗ್ರಾಮ ಪಂಚಾಯತ್, ಆಲೂರು, ಇಂ ಡಿ ತಾಲೂಕ್, ವಿಜಾಪುರ ಜಿಲ್ಲೆ ಮತ್ತು ಶ್ರೀ ಅಣ್ಣಪ್ಪ ಬಿ. ಅಹಿರ್‌ಸಂಗ್, ಅಧ್ಯಕ್ಷರು, ಆಲೂರು ಗ್ರಾಮ ಪಂಚಾಯತ್, ಅಲೂರ್, ಇಂಡಿ ತಾಲೂಕ್, ಬಿಜಾಪುರ ಜಿಲ್ಲೆ (ಇನ್ನು ಮುಂದು ಇವರನ್ನು ಎದುರುದಾರರು ಎಂದು ಸಂಭೋದಿಸಲಾಗುವುದು) ಇವರುಗಳ ವಿರುದ್ಧ ಸಲ್ಲಿಸಿದ ದೂರಿನ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಳ್ಳಲಾಗಿದೆ.

2. **ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ** :- ದೂರಿನ ಅಂಶಗಳೇನೆಂದರೆ ಎದುರುದಾರರುಗಳು ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಬಂದಂತಹ ಹಣವನ್ನು 10 ಜನ ಕೂಲಿಕಾರ್ಮಿಕರ ಹೆಸರಿನಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸರ್ಕಾರದ ಹಣವನ್ನು ಲಪಟಾಯಿಸಿರುತ್ತಾರೆಂದು ಇರುತ್ತದೆ.

3. ಸದರಿ ದೂರಿನ ಮೇರೆಗೆ 1ನೇ ಮತ್ತು 2ನೇ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರುಗಳು ತಮ್ಮ ಆಕ್ಷೇಪಣೆಯಲ್ಲಿ ದೂರಿನ ಅಂಶಗಳನ್ನು ಅಲ್ಲಗಳೆದು, ತಾವು ಕೂಲಿಕಾರ್ಮಿಕರ ಹೆಸರಿನಲ್ಲಿ ಹಣವನ್ನು ಸಂಬಂಧಪಟ್ಟ ಬ್ಯಾಂಕಿಗೆ ಚೆಕ್ ಮೂಲಕ ಸಂದಾಯ ಮಾಡಿ ಸಂಬಂಧಪಟ್ಟ ಕೂಲಿಕಾರ್ಮಿಕರ ಖಾತೆಗೆ ತುಂಬಲಾಗಿರುತ್ತದೆ.

N. Ananda

894

ಆದ್ದರಿಂದ, ಹಣವನ್ನು ಲಪಟಾಯಿಸಲಾಗಿದೆಯೆಂದು ಮಾಡಿರುವ ದೂರು ಸರಿಯಲ್ಲವೆಂದು ತಿಳಿಸಿರುತ್ತಾರೆ.

4. ಈ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರ ಪಡೆಯಲಾಗಿರುತ್ತದೆ. ಪ್ರತ್ಯುತ್ತರದಲ್ಲಿ ದೂರುದಾರರು ತಮ್ಮ ಜಾತಿಯ ಕೂಲಿಕಾರ್ಮಿಕರ ಹೆಸರಲ್ಲಿ ಎದುರುದಾರರು ಹಣವನ್ನು ಪಡೆದಿರುತ್ತಾರೆ. ಎದುರುದಾರರುಗಳೇ ಸದರಿ ಕೂಲಿಕಾರ್ಮಿಕರುಗಳ ರುಜುವನ್ನು ಮಾಡಿ ಹಣವನ್ನು ಪಡೆದಿರುತ್ತಾರೆ ಎಂದು ತಿಳಿಸಿರುತ್ತಾರೆ.

5. ದೂರುದಾರರು ಮಾಡಿರುವ ದೂರಿನ ಅಂಶಗಳನ್ನು ಮತ್ತು ಪ್ರತ್ಯುತ್ತರದಲ್ಲಿ ನೀಡಲಾದ ಉತ್ತರವನ್ನು ಪರಿಗಣಿಸಿ ಪ್ರಕರಣದ ತನಿಖೆಯನ್ನು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ವಿಜಾಪುರ ಇವರಿಗೆ ವಹಿಸುವುದು ಸೂಕ್ತವೆಂದು ತೀರ್ಮಾನಿಸಿ ತನಿಖೆಯನ್ನು ಸದರಿ ಪೊಲೀಸ್ ಅಧೀಕ್ಷಕರಿಗೆ ವಹಿಸಿಕೊಡಲಾಯಿತು. ಸದರಿ ಅಧಿಕಾರಿಗಳು ಪ್ರಕರಣದ ತನಿಖೆಯನ್ನು ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ವಿಜಯಪುರ ಇವರಗೆ ವಹಿಸಿಕೊಟ್ಟಿದ್ದು, ಸದರಿ ಪೊಲೀಸ್ ನಿರೀಕ್ಷಕರು ದಿನಾಂಕ 6.1.2015ರಂದು ತನಿಖಾ ವರದಿಯನ್ನು ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ವಿಜಯಪುರ ಇವರಿಗೆ ಸಲ್ಲಿಸಿರುತ್ತಾರೆ.

6. ಆರಕ್ಷಕ ಅಧೀಕ್ಷಕರು ದಿನಾಂಕ 16.1.15ರ ಪತ್ರದ ಮುಖೇನ ಸದರಿ ವರದಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ವಿಜಯಪುರ ಅವರ ವರದಿ ಹಾಗೂ ವರದಿಯೊಡನೆ ಸಲ್ಲಿಸಲಾದ ದಾಖಲಾತಿಗಳನ್ನು ಪರಿಶೀಲಿಸಿದ್ದಲ್ಲಿ, ತನಿಖಾಧಿಕಾರಿಗಳು 1) ಶ್ರೀ ಲಕ್ಷ್ಮಣ ತಂದೆ ಪರಸಪ್ಪ ಹೊಸಮನಿ, 2) ಶ್ರೀ ಲಕ್ಷ್ಮಣ ತಂದೆ ಶಿವಣ್ಣ ಹೊನಕೋರೆ 3) ಶ್ರೀ ಬಾಬು @ ಯಲ್ಲಪ್ಪ ತಂದೆ ಅಪ್ಪಣ್ಣ ಹೊನಕಟ್ಟಿ 4) ಶ್ರೀಮತಿ ಸುಮಿತ್ರ ಕೊಂ ವಿಠ್ಠಲ ಧೂಳೆ 5) ಶ್ರೀಮತಿ ದಾನವ್ವ ಕೊಂ ಸಿದ್ದಪ್ಪ ಹೊನಕೋರೆ 6) ಶ್ರೀ ಶ್ರೀಶೈಲ ತಂದೆ ಕಾಂತಪ್ಪ ಕಾಳೆ 7) ಶ್ರೀಮತಿ ಜಕ್ಕವ್ವ ಕೊಂ ನಿಂಗಪ್ಪ ಶಿಂದೆ 8) ಶ್ರೀ ಸಂತೋಷ್ ತಂದೆ ನಿಂಗಪ್ಪ ಕುಂಬಾರ ಇವರುಗಳ ಹೇಳಿಕೆಗಳನ್ನು ಪಡೆದಿದ್ದು ಮತ್ತು ಸ್ಥಾನಿಕ ವಿಚಾರಣೆಯನ್ನು ಮಾಡಿದ್ದು, ಈ ವಿಚಾರಣೆಯಿಂದ ಮತ್ತು ತನಿಖೆಯಿಂದ, ಮೇಲೆ ಹೇಳಿದ ವ್ಯಕ್ತಿಗಳು ಗ್ರಾಮ ಪಂಚಾಯತಿ ವತಿಯಿಂದ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಯಾವುದೇ ರೀತಿ ಕೂಲಿಕಾರ್ಮಿಕರಾಗಿ ಯಾವುದೇ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸಿರುವುದಿಲ್ಲ. ಈ ವ್ಯಕ್ತಿಗಳು ತಮ್ಮ ಹೇಳಿಕೆಯಲ್ಲಿ ಎದುರುದಾರರುಗಳು ತಮ್ಮ

ಹೆಸರಿನಲ್ಲಿ ಹಣ ತೆಗೆದು ಅವ್ಯವಹಾರ ಎಸಗಿರುತ್ತಾರೆ. ತಾವುಗಳು ಅಂಚೆ ಕಛೇರಿಯಿಂದ ಯಾವುದೇ ಹಣವನ್ನು ತೆಗೆದಿರುವುದಿಲ್ಲವೆಂದು ಹೇಳಿಕೆ ನೀಡಿರುವುದು ಕಂಡುಬರುತ್ತದೆ. ಮೇಲೆ ಹೇಳಿದ ಶ್ರೀ ಲಕ್ಷ್ಮಣ ತಂದೆ ಪರಸಪ್ಪ ಹೊಸಮನಿ ಇವರು ಇಂಗಳಗಿಯಲ್ಲಿ ಮೋಟಾರ್ ರೀವೈಂಡಿಂಗ್ ಕೆಲಸ ಮಾಡಿಕೊಂಡು ಉಪಜೀವನ ನಡೆಸುತ್ತಿರುವುದಾಗಿ ತನಿಖೆಯಿಂದ ದೃಢಪಟ್ಟಿರುತ್ತದೆ. ಅದೇ ರೀತಿ ಶ್ರೀಮತಿ ಸುಮಿತ್ರ ಇವರ ಪತಿ ಶ್ರೀ ವಿಠ್ಠಲ್ ದೋಳೆ ಇವರು ಹಾಗೂ ಇವರುಗಳ ಮಗನಾದ ಶ್ರೀ ಅಂಬಾ ದಾಸ ಇವರುಗಳು ತಮ್ಮ ಸ್ವಂತ ಟ್ರ್ಯಾಕ್ಟರ್‌ನಲ್ಲಿ ಅಕ್ಕಪಕ್ಕದ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿರುವುದಾಗಿ ದೃಢಪಟ್ಟಿರುತ್ತದೆ. ಶ್ರೀಮತಿ ದಾನವ್ವ ಇವರು ತಮ್ಮ ಇಬ್ಬರು ಗಂಡು ಮಕ್ಕಳೊಂದಿಗೆ ತೋಟದ ಮನೆಯಲ್ಲಿ ವಾಸವಿದ್ದು, ಇವರು ಉದ್ಯೋಗ ಚೀಟಿಯಲ್ಲಿರುವ ಕುಟುಂಬ ವಿವರದಲ್ಲಿ ಹೆಣ್ಣುಮಕ್ಕಳಾದ ಜಯಶ್ರೀ ಮತ್ತು ಸಾವಿತ್ರಿ ಇವರುಗಳ ಹೆಸರುಗಳನ್ನು ನಮೂದು ಮಾಡಲಾಗಿರುತ್ತದೆ, ಶ್ರೀ ಶ್ರೀಶೈಲ ಇವರು ಗೌಂಡಿ ಕೆಲಸಕ್ಕೆ ದಿನನಿತ್ಯ ಇಂಗಳಗಿಗೆ ಹೋಗಿಬರುತ್ತಿದ್ದು, ಇವರ ಉದ್ಯೋಗ ಚೀಟಿಯಲ್ಲಿ ಇವರ ತಾಯಿಯ ಹೆಸರಾದ ಶ್ರೀಮತಿ ಶಾಂತವ್ವ ಕಾಲೆ ಅನ್ನು ಸಹ ನಮೂದಿಸಲಾಗಿರುತ್ತದೆ. ಶ್ರೀ ಸಂತೋಷ್ ಇವರು 8 ವರ್ಷಗಳಿಂದ ಬೆಂಗಳೂರಿನಲ್ಲಿದ್ದು, ಈಗ 8 ತಿಂಗಳಿಂದ ಇಂಡಿಯಲ್ಲಿ ಕೆಲಸ ಮಾಡುತ್ತಿರುವುದಾಗಿ ಹೇಳಿಕೆ ನೀಡಿರುವುದು ಸ್ಪಷ್ಟಪಡುತ್ತದೆ. ಹೀಗೆ ಬೇರೆ ಬೇರೆ ಕೆಲಸದಲ್ಲಿ ನಿರತರಾದ ವ್ಯಕ್ತಿಗಳ ಹೆಸರುಗಳನ್ನು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಸೇರಿಸಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಣವನ್ನು ಲಪಟಾಯಿಸಿರುತ್ತಾರೆಂದು ಮತ್ತು ತಮಗೆ ಮೋಸವೆಸಗಿರುತ್ತಾರೆಂದು ಹಾಗೂ ಗ್ರಾಮದಲ್ಲಿ ಎದುರುದಾರರುಗಳು ಗ್ರಾಮ ಪಂಚಾಯತಿ ವತಿಯಿಂದ ಬೇರೆ ಬೇರೆ ನೆಪಾ ಹೇಳಿ ಗ್ರಾಮಸ್ಥರಿಂದ ಫೋಟೋಗಳನ್ನು ಪಡೆದು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಯಾವುದೇ ಕಾರ್ಡ್ ನೀಡದೆ ಅವರುಗಳನ್ನು ಕೂಲಿಕಾರರೆಂದು ತೋರಿಸಿ ಹಣವನ್ನು ತಾವೇ ಪಡೆದು ಮೋಸ ಮಾಡಿರುತ್ತಾರೆಂದು, ಇದಲ್ಲದೆ ಅಂಚೆ ಕಛೇರಿಯಿಂದ ಪಡೆಯಲಾದ ಮಾದರಿ ಸಹಿಯ ಪುಸ್ತಕದ ಜೆರಾಕ್ಸ್ ಪ್ರತಿಯನ್ನು ತನಿಖಾಧಿಕಾರಿಗಳು ಪಡೆದು ವಿತ್‌ಡ್ರಾವಲ್ ಸ್ಲಿಪ್‌ಗಳಲ್ಲಿದ್ದಂತಹ ಸಹಿಗೆ ಮಾದರಿ ಸಹಿಯೊಡನೆ ಹೋಲಿಸಿ ನೋಡಿದ್ದು, ಸದರಿ ಸಹಿಗಳು ಒಂದಕ್ಕೊಂದು ತಾಳೆಯಾಗುತ್ತಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ.

7. ಈ ಮೇಲಿನ ಕಾರಣಗಳ ಹಿನ್ನೆಲೆಯಲ್ಲಿ ಮತ್ತು ತನಿಖಾ ವರದಿ ಆಧಾರದ ಮೇಲೆ ಎದುರುದಾರರುಗಳು ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಸರಿಯೆಂದು ಕಂಡುಬರುತ್ತದೆ. ಇದಲ್ಲದೆ

N. Anand

ತನಿಖಾ ವರದಿಯಲ್ಲಿ 2011ನೇ ಸಾಲಿನಿಂದ 8.10.2013ರವರೆಗೆ ಶ್ರೀ ಆರ್.ಕೆ. ರಾಠೋಡ್, ಶ್ರೀ ಎಂ.ಎಂ. ಝುಂಜೋಡೆ ಮತ್ತು ಶ್ರೀ ಎಲ್ ವಿ. ಜಿದ್ದಿ ಇವರುಗಳು ಪಿ.ಡಿ.ಓ.ಗಳಾಗಿ ಕರ್ತವ್ಯ ನಿರ್ವಹಿಸಿರುತ್ತಾರೆಂದು ಇದೇ ಅವಧಿಯಲ್ಲಿ ಶ್ರೀಮತಿ ಕಮಲಾಬಾಯಿ, ಶಾ.ಭಾರಣಿ, ಮಂಗಳಬಾಯಿ ಬನ್ಸೋಡೆ, ಶ್ರೀ ಅಣ್ಣಪ್ಪ ಬಿ. ಅಹಿರಸಂಗ ಇವರುಗಳು ಪಂಚಾಯತಿ ಅಧ್ಯಕ್ಷರುಗಳಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆಂದು ತಿಳಿಸಿರುತ್ತಾರೆ. ಈ ಕಾರಣಕ್ಕಾಗಿ ಸದರಿ ಪಿ.ಡಿ.ಓ., ಮತ್ತು ಅಧ್ಯಕ್ಷರುಗಳನ್ನು 4 ರಿಂದ 6ನೇ ಎದುರುದಾರರೆಂದು ಪ್ರಕರಣದಲ್ಲಿ ನೊಂದಾಯಿಸಿ, 1 ರಿಂದ 6ನೇ ಎದುರುದಾರರುಗಳಿಗೆ ತನಿಖಾ ವರದಿಯ ಪ್ರತಿಯನ್ನು ಕಳುಹಿಸಿ, ಪ್ರತ್ಯುತ್ತರವನ್ನು ಸಲ್ಲಿಸಲು ತಿಳಿಸಲಾಗಿದ್ದು, 1ರಿಂದ 3 ಹಾಗೂ 5 ಮತ್ತು 6ನೇ ಎದುರುದಾರುಗಳು ವರದಿಯಲ್ಲಿನ ತಮ್ಮ ವಿರುದ್ಧದ ಅಂಶಗಳನ್ನು ಅಲ್ಲಗಳೆದು, ಪ್ರತ್ಯುತ್ತರವನ್ನು ಸಲ್ಲಿಸಿರುತ್ತಾರೆ. 4ನೇ ಎದುರುದಾರರು ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ. ದೂರಿನಂಶಗಳನ್ನು ಮತ್ತು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ ದಾಖಲೆಗಳನ್ನು ಪರಿಶೀಲಿಸಿದ್ದಲ್ಲಿ, ಎದುರುದಾರರುಗಳು ಸಲ್ಲಿಸಿರುವ ಆಕ್ಷೇಪಣೆಗಳಲ್ಲಿ ಹಾಗೂ ಪ್ರತ್ಯುತ್ತರದಲ್ಲಿ ನೀಡಲಾಗಿರುವ ಕಾರಣಗಳು ಸಮಂಜಸವಲ್ಲವೆಂದು ಕಂಡು ಬಂದಿರುತ್ತದೆ.

8. ಈ ಮೇಲ್ಕಂಡ ವಿಚಾರಗಳನ್ನು ಪರಿಶೀಲಿಸಿದಾಗ ಕ್ರಮವಾಗಿ 1 ರಿಂದ 3 ಹಾಗೂ 5 ಮತ್ತು 6ನೇ ಎದುರುದಾರರುಗಳಾದ – (1) ಶ್ರೀ ಎಲ್.ವಿ. ಜಿದ್ದಿ, ಪಿ.ಡಿ.ಒ., ಆಳೂರು ಗ್ರಾಮ ಪಂಚಾಯತ್, (2) ಶ್ರೀ ಅಣ್ಣಪ್ಪ ಬಿ. ಅಹಿರಸಂಗ, ಅಧ್ಯಕ್ಷರು, ಆಳೂರು ಗ್ರಾಮ ಪಂಚಾಯತ್, (3) ಶ್ರೀ ಆರ್.ಕೆ. ರಾಠೋಡ್, ಹಿಂದಿನ ಪಿ.ಡಿ.ಒ., ಆಳೂರು ಗ್ರಾಮ ಪಂಚಾಯತ್, (4) ಶ್ರೀಮತಿ ಕಮಲಾಬಾಯಿ ಬಾರಾಣಿ, ಮಾಜಿ ಅಧ್ಯಕ್ಷರು, ಆಳೂರು ಗ್ರಾಮ ಪಂಚಾಯತ್, ಹಾಗೂ (5) ಶ್ರೀಮತಿ ಮಂಗಲಾಬಾಯಿ ಬನಸೋಡೆ, ಮಾಜಿ ಅಧ್ಯಕ್ಷರು, ಆಳೂರು ಗ್ರಾಮ ಪಂಚಾಯತ್, ಇವರುಗಳು ಸಲ್ಲಿಸಿರುವ ಆಕ್ಷೇಪಣೆಗಳು, ಮೇಲೆ ಹೇಳಿದ ಕಾರಣಗಳಿಗೆ ಒಪ್ಪಲು ಬರುವುದಿಲ್ಲ. 4ನೇ ಎದುರುದಾರರಾದ ಶ್ರೀ ಎಂ.ಎನ್. ಜಂಜೋಡೆ, ಹಿಂದಿನ ಪಿ.ಡಿ.ಒ., ಅಳೂರು ಗ್ರಾಮ ಪಂಚಾಯತ್ ಇವರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸದೇ ಇರುವುದರಿಂದ ತನಿಖಾ ವರದಿಯ ಅಂಶಗಳ ಬಗೆಗಾಗಲಿ ಅಥವಾ ದೂರಿನ ಅಂಶಗಳ ಬಗೆಗಾಗಲೀ ಇವರ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಲಾಗಿದೆ. ಆದ್ದರಿಂದ, **1** ರಿಂದ 6ನೇ ಎದುರುದಾರರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ

N. Anand

(393)

ಶ್ರೀ. ಎಲ್.ವಿ. ಜಿಡ್ಡಿ,

ಕಂಡುಬಂದಿರುತ್ತದೆ. ಈ ಹಿನ್ನೆಲೆಯಲ್ಲಿ, ಶ್ರೀ ಅಣ್ಣಪ್ಪ ಬಿ. ಅಹಿರಸಂಗ, ಶ್ರೀಮತಿ ಕಮಲಾಬಾಯಿ ಬಾರಾಣಿ ಮತ್ತು ಶ್ರೀಮತಿ ಮಂಗಲಾಬಾಯಿ ಬನಸೋಡ ಇವರ ವಿರುದ್ಧ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಯಡಿಯಲ್ಲಿ ಕ್ರಮ ಜರುಗಿಸುವುದಕ್ಕೆ ಶಿಫಾರಸ್ ಮಾಡಲಾಗಿದೆ ಹಾಗೂ 3ನೇ ಎದುರುದಾರರಾದ ಶ್ರೀ ಆರ್.ಕೆ. ರಾಠೋಡ್, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಇವರು ಸೇವೆಯಿಂದ ನಿವೃತ್ತರಾಗಿರುವುದರಿಂದ ಇವರ ವಿರುದ್ಧ ಕೆ.ಸಿ.ಎಸ್.ಆರ್ಸ್ ನಿಯಮ 214(2)(ಬಿ)(ii)ರನ್ವಯ ಮತ್ತು ಇನ್ನುಳಿದ ಎದುರುದಾರರುಗಳು ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮಗಳು 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆ. ಆದ್ದರಿಂದ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ, ಸದರಿ ಎದುರುದಾರರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3)ರನ್ವಯ ಪ್ರದತ್ತವಾದ ಅಧಿಕಾರದಡಿ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ <u>ಮೂರು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ತಿಳಿಸಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 2014

(ನ್ಯಾಯಮೂರ್ತಿ ಎನ್. ಆನಂದ್),
ಉಪ ಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.

892